# ಕಲಬುರ್ಗಿಯಲ್ಲಿ ಕಡಲು! ಎಲಾ ಗಾಯದ ಮಾಯವೇ...

ಅಲ್ಲಿ ಚೂರು ಕತ್ತಲಿತ್ತು. ಪ್ರೇಮಿಗಳಿಗೆ ಹಿತವಾಗುವಷ್ಟೇ ಬೆಳಕಿತ್ತು. ಎಲ್ಲಾ ಕೆಂಪಾದವೋ ಅನ್ನೋ ಥರ ಪಶ್ಚಿಮ ರಂಗೇರಿತ್ತು. ನೀಲಿ ಕಡಲು ಕೆಂಪಾಗಿ ಕಪ್ಪಾಗುತ್ತಿತ್ತು. ಗಾಳಿಮರಗಳು ಸುಂಯ್ಯೆನ್ನುವುದು ನಿಧಾನವಾಗಿತ್ತು. ಪ್ರೀತಂನ ತೋಳುಗಳು ಸುಮಿಯ ಸೊಂಟವನ್ನು ಒತ್ತಿಹಿಡಿದಿದ್ದವು. ಸುಮಿ ತನ್ನೆರಡು ಕೈಗಳನ್ನು ಪ್ರೀತಂನ ಕುತ್ತಿಗೆ ಸುತ್ತ ಬಳಸಿ ತನ್ನೆದೆಯ ಭಾರವನ್ನು ಅವನೆದೆಗೆ ಆನಿಸಿದ್ದಳು. ಜಾವೆಲಿನ್ ಎಸೆತದಲ್ಲಿ ಹುರಿಗಟ್ಟಿದ ತೋಳುಗಳು, ಹುಟ್ಟು ಹಾಕಿ ದೋಣಿ ನಡೆಸಿ ಹರವಾದ ಎದೆ ಅವಳಿಗೆ ಆಸರೆಯಾಗಿದ್ದವು. ಆ ಹಿತವಾದ ಅಪ್ಪುಗೆಯಲ್ಲಿ ಸುಮಿಯ ಕೋಮಲ ತನು ಇನ್ನಷ್ಟು ಮೃದುಗೊಳ್ಳುತ್ತಿತ್ತು. ಪ್ರೀತಂ ಅವಳ ಹಸ್ತವನ್ನು ಚುಂಬಿಸಿದ. ಕೈ ಬೆರಳುಗಳನ್ನು ಕಚ್ಚಿದ. ಕೆನ್ನೆಗಳಿಗೆ ತನ್ನ ತುಟಿಗಳನ್ನು ಒತ್ತಿದ. ಕೊರಳಲ್ಲಿ ಸುಳಿದಾಡುವ ಕೂದಲು ಸರಿಸಿ ಕಂಠ ಕಚ್ಚಿದ. ಮುದ್ದು ಉಕ್ಕಿ ತುಟಿಗಳನ್ನು ಚುಂಬಿಸಿದ. ಅವನ ಬಿಸಿಯುಸಿರ ಶಾಖಕ್ಕೆ ಅವಳೂ ಕರಗಿದಳು. ಕಿರು ಮೀಸೆಯಂಚಿನ ತುಟಿಯನ್ನು ತನ್ನ ತುಟಿಗಳಲ್ಲಿ ಕಚ್ಚಿ ಹಿಡಿದಳು. ಇಬ್ಬರ ತುಟಿಗಳು ಬೆಸೆದುಕೊಂಡಿದ್ದರೂ ಉದ್ರೇಕದಲ್ಲಿ ಕಂಪಿಸುತ್ತಿದ್ದವು. ಒಮ್ಮೆ ಅವಳು ನವಿರಾಗಿ ತುಟಿ ಒತ್ತಿದರೆ, ಇವನು ಅದನ್ನು ಕಚ್ಚಿ ಬಿಗಿಗೊಳಿಸುವನು. ಇನ್ನೊಮ್ಮೆ ಅವಳು ಕಡಲಿನಷ್ಟು ದಾಹದಿಂದ ತುಟಿಗಳನ್ನು ಹೀರಿದರೆ, ಅವನು ಕಲಾವಿದನಂತೆ ತುಟಿಗಳಿಗೆ ಪ್ರೇಮದ ಗಂಧವನ್ನು ಸವರುವನು!



ಅಪ್ಪುಗೆಯ ಅಮಲು, ಮುದ್ದಿಸುವ ಆವೇಶವು ಇಬ್ಬರನ್ನೂ ಮೈಮರೆಸಿತ್ತು. ಉನ್ಮತ್ತ ಪ್ರೇಮದಲ್ಲಿ ಪರವಶಗೊಂಡ ಜೀವಗಳಿಗೆ ಸುತ್ತಲ ಜಗತ್ತಿನ ಪರಿವೆಯೇ ಇರಲಿಲ್ಲ; ತಲೆಯ ಹಿಂದೆ ಬಲವಾದ ಪೆಟ್ಟುಬಿದ್ದು, ರಕ್ತ ಚೆಲ್ಲಿ ಪ್ರೀತಂ ನೆಲಕ್ಕೆ ಉರುಳುವವರೆಗೂ!

4

**‘ಹ್ಯಾಶ್ ಟ್ಯಾಗ್ ಕಂಡೆಮ್ ಲವ್ ಹೇಟರ್ಸ್’**

ಪ್ರೇಮದ ಸಾಕ್ಷಾತ್ಕಾರಕ್ಕಾಗಿ ಸಾವು–ಬದುಕಿನ ಇಂಥ ಬಾಗಿಲುಗಳನ್ನೂ ದಾಟಬೇಕಾಗುತ್ತದೆ ಎನ್ನುವುದು ಸುಮಿಗೆ ತಿಳಿದಿರಲಿಲ್ಲ. ಪ್ರೇಮದ ಉನ್ಮಾದವು ಮರುಕ್ಷಣವೇ ಇಂಥ ಘೋರ ಸ್ಥಿತಿಗೆ ತಳ್ಳಬಹುದು ಎಂಬುದರ ಅರಿವಿರಲಿಲ್ಲ. ಆಘಾತದ ಗಳಿಗೆಯಲ್ಲೂ ಪರಿಸ್ಥಿಯನ್ನು ನಿಭಾಯಿಸುವ ಅದಮ್ಯ ಚೈತನ್ಯವೊಂದು ಚಿಮ್ಮುತ್ತದೆ ಎನ್ನುವುದೂ ಒಂದು ಜೀವನನುಭವಾಯಿತು ಅವಳಿಗೆ. ಅಂಥ ಶಕ್ತಿ ಸುಮಿಯಲ್ಲಿ ಜಾಗೃತಗೊಳ್ಳದಿದ್ದರೆ ಪ್ರೀತಂನ ಜೀವಕ್ಕೆ ಏನಾಗುತ್ತಿತ್ತೋ! ಆ ಮುಸ್ಸಂಜೆಯ ನಸುಗತ್ತಲಲ್ಲಿ ಮುಸುಕುಧಾರಿಗಳ ಹೊಡೆತಕ್ಕೆ ಪ್ರೀತಂ ಉರುಳಿದಾಗ, ಆ ಕ್ಷಣಕ್ಕೆ ದಿಕ್ಕೆಟ್ಟರೂ, ಮರುಕ್ಷಣವೇ ಆಕೆ ತೋರಿದ ದಿಟ್ಟತನವನ್ನು ಎಲ್ಲರೂ ಕೊಂಡಾಡಿದವರೇ! ಸುಮಿಗೆ ಅದು ತನ್ನ ಪ್ರಜ್ಞೆಯನ್ನು ಮೀರಿದ ಪ್ರತಿಕ್ರಿಯೆಯಾಗಿತ್ತು ಅನಿಸುತ್ತದೆ. ಜೀವನ್ಮರಣದ ಗಳಿಗೆಯಲ್ಲಿ ಚಿಮ್ಮುವ ಪ್ರಕ್ರಿಯೆ ಬುದ್ಧಿಗೆ ಅತೀತವಾದದ್ದು ಎಂಬುದು ಅವಳ ಈಗಿನ ತರ್ಕ. ಆ ಆಘಾತದ ಗಳಿಗೆಯಲ್ಲಿ ನಿಭಾಯಿಸಿದ್ದೆಲ್ಲವೂ ನೆನಪಿನ ಚೌಕಟ್ಟುಗಳಲ್ಲಿ ಅಸ್ಪಷ್ಟವಾಗಿ ದಾಖಲಾಗಿದ್ದವು. ಅರೆಪ್ರಜ್ಞಾವಸ್ಥೆಯಲ್ಲಿ ನೆಲಕ್ಕೊರಗಿದ್ದ ಪ್ರೀತಂನನ್ನು ತೊಡೆಮೇಲೆ ಮಲಗಿಸಿಕೊಂಡು, ರಕ್ತ ನಿಲ್ಲಿಸಲು ತಕ್ಷಣವೇ ದುಪ್ಪಟ್ಟಾ ಸೀಳಿ ಪಟ್ಟಿಮಾಡಿ ಗಾಯಕ್ಕೆ ಬಿಗಿದುಕಟ್ಟಿದ್ದಳು. ಹತ್ತಿರ ಯಾರಾದರೂ ಇರುವರೇ ಎಂದು ಕೂಗಿದ್ದಳು. ಮೊಬೈಲಿಂದ ವಿರುಪಾಕ್ಷಿಗೆ ಕಾಲ್ ಮಾಡಿದ್ದಳು. ಅವನದು ಬಿಜಿ ಟೋನ್ ಬರುವಾಗ ಪ್ರೀತಂನ ಫೋನ್ ಎತ್ತಿ ಅದರ ಪಾಸ್‌ವರ್ಡ್‌ನ್ನು ತಿಳಿಯದೇ ಇದ್ದರೂ ಬೆರಳುಗಳು ಸುಮ್ಮನೇ ‘ಪ್ರೀತ್ಸು’ ಎಂದು ಟೈಪ್ ಮಾಡಿದಾಗ ಅದು ಓಪನ್ ಆಗಿತ್ತು! ಕಾಲ್ ರಿಜಿಸ್ಟರಿಗೆ ಹೋಗಿ ಇತ್ತೀಚಿನ ಕರೆಗಳನ್ನು ತಡಕಾಡಿದಾಗ ಆಯಿ, ಮಾವಾ, ಬೈತಕೋಲ್ ಚಿಕ್ಕಪ್ಪ, ರೊಡ್ರಿಗ್ಸ್ ಸರ್ ಹೆಸರುಗಳು ಕಂಡಿದ್ದವು. ರೊಡ್ರಿಗ್ಸ್ ಸರ್ ಅವರಿಗೆ ಕಾಲ್ ಮಾಡಿ ವಿಷಯ ತಿಳಿಸಿದ್ದಳು.

‘ಪ್ರೀತಂನನ್ನು ಉಳಿಸಿ, ಪ್ಲೀಸ್’ ಎಂದಿದ್ದಳು. ರೊಡ್ರಿಗ್ಸ್ ಸರ್ ‘ಐ ವಿಲ್ ರೀಚ್ ಇನ್ ಟು ಮಿನಿಟ್ಸ್’ ಅಂದಿದ್ದರು. ಆ ಟು ಮಿನಟ್ಸ್ ಕೂಡ ಅವಳಿಗೆ ದೀರ್ಘ ಅನಿಸಿತ್ತು. ಸ್ಮೃತಿ ತಪ್ಪಿದ ಪ್ರೀತಂನನ್ನು ಹೇಗೋ ಹೆಗಲಿಗಾನಿಸಿ ಗಾಳಿಮರಗಳ ನಡುವೆ ನಡೆದು ಹೈವೇ ತಲುಪಿದ್ದಳು. ಅಷ್ಟರಲ್ಲಿ ಎಂಟತ್ತು ಬೈಕುಗಳೂ ಒಂದೆರಡು ಕಾರುಗಳೂ ಅಲ್ಲಿಗೆ ಬಂದಿದ್ದವು. ಆ ನಂತರ ನಡೆದದ್ದೆಲ್ಲ ರೊಡ್ರಿಗ್ಸ್ ಸರ್ ಸಾರಥ್ಯದಲ್ಲೇ. ಸಿವಿಲ್ ಆಸ್ಪತ್ರೆಯಲ್ಲಿ ಕೂಡ ಅರೆಕ್ಷಣವೂ ವಿಳಂಬವಾಗಲಿಲ್ಲ. ಪ್ರೀತಂ ಪ್ರಾಣಾಪಾಯದಿಂದ ಪಾರಾಗಿದ್ದ. ಪ್ರೀತಂನಿಗೆ ಸ್ಮೃತಿ ಬಂದ ನಂತರವೇ ಯಾರೋ ಹೋಗಿ ಆಯಿಯನ್ನು ಕರೆದು ತಂದದ್ದು.

